ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಕಾದಂಬರಿ ಹಾಗೂ ಕಥೆ; ಇವೆರಡರಲ್ಲಿಯ ವ್ಯತ್ಯಾಸವೇನು?*



ಹೆಚ್ಚೇನಿಲ್ಲ. ಕಥೆಗೆ ಎಲಾಸ್ಟಿಕ್ ಹಾಕಿ ಚೂಯಿಂಗ್ ಗಮ್‌ನಂತೆ ಜಗಿದು ಜಗ್ಗಿ ಎಳೆದರೆ ಕಾದಂಬರಿ!

ಜಿ.ಮಂಜುನಾಥ್, ಹಗರಿಬೊಮ್ಮನಹಳ್ಳಿ

*ಅಂಗಳದಲ್ಲಿ ಅಡುಗೆ ಆಟ ಆಡಿದ ನನಗೆ ಅಡುಗೆ ಮಾಡಲು ಬರುತ್ತಿಲ್ಲವಲ್ಲ...?*

ಚಿಂತೆ ಬೇಡ. ನಿಮ್ಮ ಬೇಳೆ ಬೇಯಿಸುವವಳು ಬಂದಾಗ ನಿಮಗೆ ಅಡುಗೆ ತಾನಾಗಿಯೇ ಒಲಿಯುತ್ತದೆ!

ಎಂ.ಎಸ್.ಧರ್ಮೇಂದ್ರ ಜಿಟಿಆರ್‌ಇ ಕ್ಯಾಂಪಸ್

*ಕೆಲವೊಂದು ಜೀವನಚಕ್ರಗಳು ರೌಡಿಸಂನಿಂದ ಪ್ರಾರಂಭವಾಗಿ ರಾಜಕೀಯದಲ್ಲಿ ಅಂತ್ಯವಾಗಲು ಕಾರಣವೇನು?*

ಅದೇ ಸರಿಯಾದ ಮಾರ್ಗ. ಭಾರತೀಯ ಲೂಟಿಶಿಕ್ಷಣ ವಿಶ್ವವಿದ್ಯಾಲಯದಲ್ಲಿ ರೌಡಿಯಿಸಂ ಡಿಗ್ರಿ, ರಾಜಕಾರಣ ಪಿಹೆಚ್‌ಡಿ!

ಡೈರಿ ವಿಶ್ವನಾಥ್, ಬೆಂಗಳೂರು

*ಹಾಟ್‌ಸ್ಪಾಟ್ ಯಾವುದು?*



ಬಾಸ್‌ನ ನೆತ್ತಿ!

ಎಸ್.ಭಗವತಿ, ಗೊರೂರು

*ಹೇಳಿದ್ದನ್ನು ಮಾಡು, ಮಾಡಿದ್ದನ್ನು ಅನುಕರಿಸಬೇಡ ಅಂತ ಉಪದೇಶ ಕೊಡೋವ್ರಿಗೆ ನಿಮ್ಮ ಕಿವಿಮಾತೇನು?*

ಅಂತಹವರು ವಿಡಿಯೋ ಬದಲು ಆಡಿಯೋದಲ್ಲೇ ಇರುವುದು ಕ್ಷೇಮ!

ಕೆ.ಮೈಥಿಲಿಕೃಷ್ಣ, ಬೆಂಗಳೂರು

*ವಿವೇಕಾನಂದರಿಗೂ, ದೇವೇಗೌಡರಿಗೂ ಏನಾದರೂ ಸಾಮ್ಯತೆ ಇದೆಯೆ?*

ಇದೆಯಲ್ಲಾ! ಇಬ್ಬರದೂ ಹೆಣ್ಣಿನ ವಿಷಯದಲ್ಲಿ ಪೂಜ್ಯಭಾವ.

ಜಿ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಬಾರ್ ಮಾಲೀಕರ ಜೊತೆ ಪೊಲೀಸರ ಅಡ್ಜಸ್ಟ್‌ಮೆಂಟಂತೆ?*

ಅದು ಅಡ್ಜಸ್ಟ್‌ಮೆಂಟಲ್ಲ, ಅನುಗಾಲದ ಡ್ಯುಯೆಟ್ಟು.

ಸುಮತಿ ಕೃಷ್ಣರಾವ್, ತುಮಕೂರು

*ಯಾತ್ರಾರ್ಥಿಗಳಿಗೆ ಹೋಗಿ ಮರಳುವಾಗಲೇ ಅಪಘಾತಗಳು ಆಗುವುದಕ್ಕೆ ಕಾರಣವೇನು ರಾಮ್‌ಜೀ?*

ಡ್ರೈವರ್ ಭಕ್ತಿಪರವಶನಾಗಿ ಕಣ್ಣು ಮುಚ್ಚುವುದರಿಂದ!

ಕುಮಾರ ಚಲವಾದಿ, ಶಿರಸಿ

*ಆರಕ್ಷಕರಿಗೂ, ಶಿಕ್ಷಕರಿಗೂ ಏನು ವ್ಯತ್ಯಾಸ?*

ಆರಕ್ಷಕರು ಕೊಟ್ಟ ರಕ್ಷಣೆ ತಲೆ ಕಾಯುತ್ತದೆ, ಶಿಕ್ಷಕರು ಕೊಟ್ಟ ಶಿಕ್ಷಣ ತಲೆತಲಾಂತರ ಕಾಯುತ್ತದೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಅಂಗಡಿಗಳಿಗೇಕೆ ಹೆಚ್ಚಾಗಿ ಹೆಂಗಸರ ಹೆಸರಿಡುತ್ತಾರೆ?*

ಗಂಡಸರಿಗೆ ಸುಲಭವಾಗಿ ಜ್ಞಾಪಕದಲ್ಲಿರಲೆಂದು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ರಾಜಕೀಯ ನಾಯಕರು ಕೊನೆಯಲ್ಲಿ ತೆಗೆದುಕೊಂಡುಹೋಗುವುದು ಏನನ್ನು?*

ಸರ್ಕಾರದ ಖರ್ಚಿನಲ್ಲಿ ರುದ್ರಭೂಮಿಯವರೆಗೆ ಡೆಡ್‌ವ್ಯಾನನ್ನು!

ಅಮರಯ್ಯ ಪತ್ರಿಮಠ, ಶೋರಾಪೂರ

*ಸತ್ಯವನ್ನು ಮುಚ್ಚಿಡಲಾಗದಂತೆ?*

ಈ ಮಾತನ್ನು ಕೇಳಿ ಇಡೀ ವಕೀಲ ಸಮುದಾಯ ಹೊಟ್ಟೆ ಹುಣ್ಣಾಗುವಷ್ಟು ನಗುತ್ತಿದೆಯಂತೆ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು

*ಶುಭಕಾರ್ಯಕ್ಕೆ ಹೊರಟಾಗ ಬೆಕ್ಕು ಅಡ್ಡ ಬಂದರೆ ಅಪಶಕುನ ಅಂತಾರೆ; ಹುಡುಗಿ ಅಡ್ಡ ಬಂದರೆ...?*

ಪರಶಿವನೇ ಪರವಶವಾಗುವನಂತೆ! ಇವಳ ಮೋಹದ ಜಾಲಕ್ಕಿಂತ ಮಾರ್ಜಾಲವೇ ವಾಸಿ!

## ಬಹುಮಾನಿತ ಪ್ರಶ್ನೆ

ಎನ್.ಆರ್.ಭಾದ್ರಿ

*ತೇನ ವಿನಾ ತೃಣಮಪಿ ನ ಚಲತಿ ಎಂದ ಮೇಲೆ ಮನುಷ್ಯ ಪ್ರಯತ್ನ ಬೇಕೆ ಬೇಡವೆ?*

ತೃಣಕ್ಕೆ ಬೇಕಾಗಿಲ್ಲ, ಮನುಷ್ಯನಿಗೆ ಬೇಕು.

ಬಿ.ಎಸ್. ಮುಳ್ಳೂರ, ಹಲಗತ್ತಿ

*ಕುರುಡನಿಗೆ ಯಾವ ಭಾವನೆಗಳು ಇರುತ್ತವೆ?*

ಭಾವನೆಗಳಿಗೆ ಕುರುಡಾದವನಿಗಿಂತ ಉತ್ತಮ ಭಾವನೆಗಳು!

ನವಿತ ರವಿಕುಮಾರ್, ಕೊಪ್ಪ

*ದೇವರ ವೃತ್ತಿಗೆ ನಿವೃತ್ತಿಯೇ ಇಲ್ಲವೆ?*

ಕೇವಲ ಒಂದು ಗೃಹ ನೋಡಿಕೊಳ್ಳುವ ಗೃಹಿಣಿಗೇ ನಿವೃತ್ತಿ ಇಲ್ಲದಿರುವಾಗ ಇಡೀ ಜಗತ್ತು ನೋಡಿಕೊಳ್ಳುವವನಿಗೆ ಇರಲಾದೀತೇ!

ಓಂಚನ್ನೇಶ್, ಅರಬಿಳಚಿ ಕ್ಯಾಂಪ್

*ಸತ್ತಾಗ ಶವದ ಮೇಲೆ ಕಡಲೆಪುರಿಯನ್ನು ಏಕೆ ಎರಚುತ್ತಾರೆ?*

ಆತ್ಮವೂ ಅಷ್ಟೇ ಹಗುರ ಎಂದು ಸೂಚಿಸಲು!

ರಮಿತ್ ಸಿಕ್ವೇರಾ, ಹೊಸನಗರ

*ಹೆಚ್ಚಿನ ಹುಡುಗಿಯರು ಹುಡುಗರಿಂದ ಅಪೇಕ್ಷಿಸುವ ಮೊದಲ ವಸ್ತು ವೇನು?*




ಫೋನ್ ನಂಬರ್.

ಆರ್. ಮಧುಸೂದನ್, ಹಾಸನ

*ಐವರು ಗಂಡಂದಿರಲ್ಲಿ ದ್ರೌಪದಿಗೆ ಹೆಚ್ಚು ಸುಖ ಕೊಟ್ಟವರು ಯಾರು?*

ಕೀಚಕನನ್ನು ಕಚಕ್ ಎನಿಸಿ, ಮೂಳೆಬಾಚಣಿಗೆಯಲ್ಲಿ ತಲೆ ಬಾಚಿ, ಸೌಗಂಧಿಕಾ ಪುಷ್ಪ ಮುಡಿಸಿದ ಭೀಮನೇ.

ಪೇಂಟರ್ ಪಾಪು, ಸಂತೇಮರಹಳ್ಳಿ

*ನೆಮ್ಮದಿ ಇರುವ ಪವಿತ್ರ ಸ್ಥಳ ಎಲ್ಲಿದೆ?*

ವಾಸ್ತವಕ್ಕೆ ಒಗ್ಗುವ ಎಲ್ಲಾ ಮನಗಳಲ್ಲಿ!

■ ರಾಮ್